ಧಂತಹವನನ್ನು ಹಿಡಿಯುತ್ತಿದ್ದೆವು. ಕಾನೂನು ಪ್ರಕಾರ ಅವರಿಗೆ ಶಿಕ್ಷೆ ಆಗ ಬೇಕಾಗುತ್ತದೆ. ಬೆಂಗಳೂರು ನಗರದಲ್ಲಿ ೩ ಕಡೆ ವಿವಾಕರ ಹೆಗ್ಗಡೆ ಒಬ್ಬ ವಿದ್ಯಾರ್ಥಿ ಗೊಂಡಾ ಎಂದು ಅನೇಕ ಅಪರಾಧಗಳ ತನಿಖೆ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ಅವರ ಸ್ನೇಹಿತರೆ ಅವನನ್ನು ಕೊಲೆ ಮಾಡಿದ್ದಾರೆ. ಅವರನ್ನೂ ಪತ್ತೆ ಮಾಡಿದ್ದೇವೆ. ಶಾಮಣ್ಣ ರೆಡ್ಡಿ ಎಂದು ಒಬ್ಬರು, ಅವರು ವೈಯಕ್ತಿಕವಾಗಿ ಒಂದು ಮನೆಯ ಜಗಳದ ದ್ವೇಷದಿಂದ ಅವರ ಸಂಬಂಧಿಕರನ್ನೇ ಕೊಲೆ ಮಾಡಿದ್ದಾರೆ. ಅದೇ ರೀತಿ ಇಬ್ಬರು ಆಟೋ ನಡೆಸುವಂತಹ ಸ್ನೇಹಿತರಲ್ಲಿ ೫,೦೦೦ ರೂಪಾಯಿಗಳ ವಿಷಯದಲ್ಲಿ ಹಣವನ್ನು ಕೊಟ್ಟಿಲ್ಲವೆಂದು ಮತ್ತೊಬ್ಬರು ಅವನನ್ನು ಕೊಲೆ ಮಾಡಿದ್ದಾರೆ. ಅವರನ್ನು ಹಿಡಿದು ಕಾನೂನು ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಆ ದೃಷ್ಟಿಯಲ್ಲಿ ಬಹುಶಃ ಒಬ್ಬರಿಗೊಬ್ಬರು ಅವರವರಲ್ಲೇ ಜಗಳವಾಗಿ ತಮ್ಮ ತಮ್ಮಲ್ಲೇ ವೈಮನಸ್ಸು ಉಂಟಾಗಿ ಕೊಲೆಗಳಾಗಿವೆ. ಎಷ್ಟೇ ಕಷ್ಟವಾದರೂ ಕಾನೂನು ಪಾಲನೆ ಮಾಡಿಲ್ಲ ಎಂದು ಹೇಳುವುದಕ್ಕೆ ಬದಲಾಗಿ ಅಂತಹವರನ್ನೂ ಹಿಡಿದು ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡು ಅವರನ್ನು ಕೋರ್ಟು ಮುಂದೆ ಪ್ರೊಡ್ಯೂಸ್ ಮಾಡಿದ್ದೇವೆ. ಈ ದೃಷ್ಟಿಯಿಂದ ನಾನು ಹಿಂದಿಗಿಂತ ಇವೊತ್ತು ನೋಡಿದಾಗ ಶಾಂತಿ ಪಾಲನೆ ಮಾಡುವುದರಲ್ಲಿ ಸಾಕಷ್ಟು ಮಟ್ಟಿಗೆ ಅಧಿಕಾರಿಗಳು ಶ್ರಮವಹಿಸಿದ್ದಾರೆ ನಮ್ಮ ಅಧಿಕಾರಿಗಳು ಸಾಕಷ್ಟು ರೀತಿಯಲ್ಲಿ ಕೆಲಸ ಮಾಡಿದ್ದಾರೆ, ಆದ್ದರಿಂದ ವಿವರವಾದ ಉತ್ತರವನ್ನು ಪ್ರತಿಯೊಬ್ಬರಿಗೂ ಕೊಡದೆ ಇಲ್ಲಿ ಮುಖ್ಯವಾಗಿ ಬಂದಂತಹ ವಿಷಯಗಳಿಗೆ ಮಾತ್ರ ನಾನು ಉತ್ತರವನ್ನು ಹೇಳಿದ್ದೇನೆ. ದಯವಾಡಿ ಇದುವರೆವಿಗೂ ಇಟ್ಟಂತಹ ವಿಶ್ವಾಸವನ್ನು ಇನ್ನು ಮುಂದೆಯೂ ಇಟ್ಟುಕೊಳ್ಳಿ. ಇನ್ನು ಮುಂದೆ ಈ ರೀತಿಯ ಘಟನೆಗಳು ಆಗದೇ ಇರುವ ರೀತಿಯಲ್ಲಿ ನಾವು ನೀವು ಒಟ್ಟಾಗಿ ಸೇರಿ ಸರಿಪಡಿಸುವುದಕ್ಕೆ ಪ್ರಯತ್ನ ಮಾಡೋಣ ಮತ್ತು ಸರ್ಕಾರ ಈಗ ಸೊಂದಂತಹವರಿಗೆ ಪರಿಹಾರ ಧನವನ್ನು ಕೊಡತಕ್ಕಂತಹ ಕಾಲದಲ್ಲಿ ಹಿಂದೆ ೬,೫೦೦ ರೂಪಾಯಿಗಳನ್ನು ಕೊಡುತ್ತಿದ್ದರು. ಅದನ್ನು ಈಗ ೭,೫೦೦ ರೂಪಾಯಿಗಳೆಂದು ಮಾಡಿದ್ದೇವೆ. ಸತ್ತಂತಹವರಿಗೆ ೨೦,೦೦೦ ರೂಪಾಯಿಗಳೆಂದು ಮಾಡಿದ್ದೇವೆ. ಇದರಿಂದ ಅವರಿಗೆ ಆದಂತಹ ನಷ್ಟವನ್ನು ಸಂಪೂರ್ಣವಾಗಿ ತುಂಬಿಕೊಡುವುದಕ್ಕೆ ಸಾಧ್ಯವಾಗದಿದ್ದರೂ ಅವರಿಗೆ ಸಹಾನುಭೂತಿ ವ್ಯಕ್ತಪಡಿಸುವುದಕ್ಕೆ ಸ್ಥಾಧ್ಯವಾಗುತ್ತದೆ. ಇದೇ ರೀತಿಯಲ್ಲಿ ಸಹಾಯ ಮಾಡುವುದಕ್ಕೆ ಯಾವಾಗಲೂ ನಾವು ಸಿದ್ಧವಾಗಿದ್ದೇವೆ ಸಾಮರಸ್ಯ ವಾತಾವರಣವನ್ನು ಉಂಟು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಸದನದಲ್ಲಿ ಆಶ್ವಾಸನೆಯನ್ನು ಕೊಡುತ್ತಿದ್ದೇನೆ ಮತ್ತೆ ಇಪತ್ತು ಬೆಳಗ್ಗೆ ೩೫ಳಿರ ನಿಯಮದ ಮೇಲೆ ಶ್ರೀಮಾನ್ ವೆಂಕಟರಾಮಯ್ಯನವರು ಎತ್ತಿದಂತಹ ಪ್ರಶ್ನೆಗೆ ನನ್ನ ಲಿಖಿತ ಹೇಳಿಕೆಯನ್ನು ಸದನದ ಟೇಬಲ್ ಮೇಲೆ ಇಡುತ್ತಿದ್ದೇನೆ.

Statement by the Minister

Reg. Cases of murder, decoity etc, in Bangalore city

ಬೆಂಗಳೂರು ನಗರದಲ್ಲಿ ೧೯೮೩ ರಿಂದ ೧೯೮೫ ರವರೆಗೆ ಮತ್ತು ೧-೧-೧೯೮೬ ರಿಂದ ೩೧-೭-೧೯೮೬ ರವರೆಗೆ ಸಂಬಂಧಿಸಿದ ಅಪರಾಧಗಳ ಸಂಖ್ಯೆ ಕೆಳಗಿನಂತಿದೆ.

ಕ್ರಮ ಸಂಖ್ಯೆ.	ಅಪರಾಧಗಳು	೧೯೮೩	೧೯೮೪	೧೯೮೫	೧೯೮೬ (೩೧-೭-೧೯೮೬ರವರೆಗೆ)
೧)	ಕೊಲೆ	೬೮	೮೪	೯೨	೪೯
೨)	ದರೋಡೆ	೧೧೧	೧೫೫	೧೩	೧೩
೩)	ಸುಲಿಗೆ	೨೮೫	೨೪೯	೧೯೨	೧೧೫
೪)	ಕನ್ನ ಕಳವು				
	ಅ) ರಾತ್ರಿ	೧೭೬೭	೧೫೭೭	೧೩೨೧	೬೯೩
	ಆ) ಹಗಲು	೨೩೩	೨೪೯	೧೯೧	೧೦೫

೧	೨	೩	೪	೫	೬
೫)	ಸರ ಕೀಳುವುದು	೧೫೦	೧೦೮	೫೮	೬೩
೬)	ಗಲಭೆ	೩೪೭	೫೫೫	೨೧೫	೧೨೫
೭)	ಕಳವು	೭೬೧೨	೭೧೬೩	೭೧೨೮	೪೬೭
೮)	ವರದಕ್ಷಿಣಾ ಅಪರಾಧಗಳು –		೩೭	೯೬	೧೦೭
೯)	ರೇಪ್	೨೪	೨೧	೨೦	೧೯
೧೦)	ವರದಕ್ಷಿಣಾ ಸಾವು	೬	೧೧	೨೨	೧೫
೧೧)	ಹೆಣ್ಣಿನ ಮೇಲೆ ಹಲ್ಲೆ	೮೪	೮೯	೧೦೦	೫೯
೧೨)	ಹಲ್ಲೆಗಳು	೨೧೬೮	೧೯೦೮	೨೮೦೦	೧೭೫೭

ಮೇಲಿನ ಅಂಕಿ ಅಂಶಗಳನ್ನು ಪರಿಶೀಲಿಸಿದಾಗ ಬೆಂಗಳೂರು ನಗರದಲ್ಲಿ ಅಪರಾಧ ಸಂಭವಿಕೆಯಲ್ಲಿ ಅಂದರೆ ಸುಲಿಗೆ, ಕನ್ನ ಕಳವು, ಕಳವು, ಸರ ಕೀಳುವಿಕೆ ಹಲ್ಲೆ ಮುಂತಾದವುಗಳಲ್ಲಿ ಗಮನಾರ್ಹ ಇಳಿತವಿದೆ. ನಗರ ಬೆಳೆಯುತ್ತಿರುವ ವೇಗ ವರ್ಷದಿಂದ ವರ್ಷಕ್ಕೆ ಜನಸಂಖ್ಯೆಯಲ್ಲಾಗುತ್ತಿರುವ ಹೆಚ್ಚಳ, ಪೋಲೀಸರ ಸಂಖ್ಯೆ ಮತ್ತು ಇತರ ತೊಂದರೆಗಳನ್ನು ಗಮನದಲ್ಲಿಟ್ಟುಕೊಂಡರೆ ಅನೇಕ ಅಪರಾಧ ವಿಭಾಗಗಳಲ್ಲಿ ಉಂಟಾಗಿರುವ ಇಳಿತ ನಗರ ಪೋಲೀಸರು ಅಪರಾಧಗಳ ಮತ್ತು ಅಪರಾಧಿಗಳ ಮೇಲೆ ಸಾಧಿಸಿರುವ ಹಿಡಿತ ಮತ್ತು ಅವರ ದಕ್ಷತೆಯ ಆರಿವು ಸಮಗಾಗದಿರುವುದು.

ಕೇವಲ ೨ ರೀತಿಯ ಅಪರಾಧಗಳಲ್ಲಿ ಸ್ವಲ್ಪ ಹೆಚ್ಚಳವಿದೆ. ಇವು ದರೋಡೆ ಮತ್ತು ವರದಕ್ಷಿಣಾ ಕಾಯಿದೆಗೆ ಸಂಭವಿಸಿದ ಅಪರಾಧಗಳು. ದರೋಡೆಯಲ್ಲಿ ಹೆಚ್ಚಳವಿರುವುದಕ್ಕೆ ಕಾರಣ ಈ ವರ್ಷದ ಮೊದಲ ಮೂರು ತಿಂಗಳುಗಳಲ್ಲಿ ಉತ್ತರ ಭಾರತದಿಂದ ಬೆಂಗಳೂರಿಗೆ ದರೋಡೆಕೋರರ ಒಂದು ತಂಡ ಬಂದು ೮ ದರೋಡೆಗಳನ್ನು ಮಾಡಿತು. ಇವುಗಳನ್ನು ಬಿಟ್ಟರೆ ಬೆಂಗಳೂರಿನಲ್ಲಿ ದರೋಡೆಗಳು ಬಹು ಅಪರೂಪವಾಗಿರುತ್ತವೆ. ವರದಕ್ಷಿಣಾ ಕಾಯಿದೆಯ ಅನ್ವಯದ ಕೇಸುಗಳಲ್ಲಿ ಹೆಚ್ಚಳಕ್ಕೆ ಇತ್ತೀಚೆಗೆ ಪೌರಸರಲ್ಲಿ ವರದಕ್ಷಿಣೆ ಕೇಳುವುದನ್ನು ಮತ್ತು ಪಡೆಯುವುದನ್ನು ಶಿಕ್ಷಿಸಲು ಒಂದು ಕಾನೂನು ಇದೆ ಎಂಬ ಅರಿವು ಮತ್ತು ಅದರ ಉಪಯೋಗ ಪಡೆಯಬೇಕು ಎಂಬ ಹುಮ್ಮಸ್ಸು ಕಾರಣ. ಈ ರೀತಿಯ ಹುಮ್ಮಸ್ಸು ಇತ್ತೀಚೆಗಷ್ಟೇ ಹೆಚ್ಚು ಹೆಚ್ಚು ಕಾಣಬರುತ್ತಿದೆ.

ಆದ್ದರಿಂದ ನಗರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ ಎಂಬುದು ಸರಿಯಿರುವುದಿಲ್ಲ. ಬೇರೆ ಬೇರೆ ರೀತಿಯಲ್ಲಿ ನಾನು ಯೋಚಿಸಿದಾಗ ನಗರದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯಲ್ಲಿ ಹೆಚ್ಚಿನ ಮಟ್ಟಿಗೆ ಸುಧಾರಣೆ ಆಗಿದೆ.

ನಗರ ಪೋಲೀಸರು ಕ್ರಿಮಿನಲ್ ಪ್ರೊಸೀಜರ್ ಕೋಡಿನ ೧೦೯ ಮತ್ತು ೧೧೦ ವಿಧಿಗಳಲ್ಲಿ ಮತ್ತು ಪೋಲೀಸ್ ಕಾಯಿದೆಯ ೬೬ ಮತ್ತು ೮೮ನೆಯ ವಿಧಿಗಳಲ್ಲಿ ಅಪರಾಧ ತಡೆಯುವಿಕೆಗೆ ಬಡಪಟ್ಟು ಕ್ರಮ ಕೈಗೊಂಡಿರುವರು. ನಗರದ ದೂರ್ತ ಗೂಂಡಾಗಳು ಮತ್ತು ಇತರ ಸಮಾಜ ದ್ರೋಹಿಗಳನ್ನು ಕರ್ನಾಟಕ ಪ್ರಿವೆನ್ಷನ್ ಆಫ್ ಡೇಂಜರಸ್ ಆಕ್ಟಿವಿಟೀಸ್ ಬೂರ್ಲೆಗ್ಗರ್ಸ್, ಡ್ರಗ್ ಆಫೆಂಡರ್ಸ್, ಗ್ಯಾಂಬಲರ್ಸ್, ಗೂಂಡಾಸ್ ಇಮ್ಮೋರಲ್ ಟ್ರಾಫಿಕ್ ಅಫೆಂಡರ್ಸ್ ಮತ್ತು ಸ್ಲಮ್ ಗ್ರಾಬರ್ಸ್ ಆಕ್ಟ್ ೧೯೮೫ ಇವರನ್ವಯ ಸ್ಥಾನ ಬದ್ಧತೆಯಲ್ಲಿ ಸಹ ಇಡಲಾಯಿತು. ಈಗ್ಗೆ ಸ್ಥಾನ ಬದ್ಧತೆಯಲ್ಲಿ ಇಟ್ಟವರನ್ನು ಕೆಲವು ಸಣ್ಣ ಸಣ್ಣ ತಾಂತ್ರಿಕ ಕಾರಣಗಳಿಗಾಗಿ ಸೆರೆಯಿಂದ ಬಿಡಲ್ಪಟ್ಟಿದ್ದಾಗ ಈ ಕಾನೂನನ್ನು ಇನ್ನೂ ಭದ್ರಪಡಿಸುವ ವಿಚಾರವನ್ನು ಸರ್ಕಾರ ಪರಿಶೀಲಿಸುತ್ತಿದೆ.

ಕಮೀಷನರಪರಿಂದ ಕಾನ್ಸ್‌ಟೇಬಲ್‌ವರೆಗೆ ವ್ಯವಸ್ಥಿತ ರೀತಿಯಲ್ಲಿ ಪ್ರತಿಯೊಬ್ಬರು ರಾತ್ರಿ ಮತ್ತು ಹಗಲು ಗಸ್ತನ್ನು ನಡೆಸುತ್ತಿದ್ದು ಇದು ಅಪರಾಧ ಸಂಭವಿಕೆಯನ್ನು ತಡೆಯುವಲ್ಲಿ ಬಹಳ ಪರಿಣಾಮಕಾರಿಯಾಗಿದೆ. ಯಾವುದೇ ದೊಡ್ಡ ಗಲಭೆ ಪರಿಸ್ಥಿತಿ ಸಂಭವಿಸಬಹುದೆಂದು ಕಂಡು ಬಂದಾಗ ನಗರದ ಎಲ್ಲಾ ಪೋಲೀಸ್ ತುಕಡಿಗಳನ್ನು ಮತ್ತು ಪೋಲೀಸರನ್ನು ಅವಶ್ಯ ಕಂಡು ಬಂದ ಸ್ಥಳಗಳಲ್ಲಿ ಮೊದಲೇ ನೇಮಿಸಿ ಉಸ್ತುವಾರಿ ವಹಿಸುವುದರಿಂದ ಅನೇಕ ಗಲಭೆ ಉಂಟಾಗುತ್ತಿದ್ದ ಸಂದರ್ಭಗಳು ಹತೋಟಿಗೆ ಬಂದು ಗಲಭೆ ತಪ್ಪಿವೆ.

ದಿನಾಂಕ: ೧೨-೮-೮೬ ರಂದು ರಾತ್ರಿ ಸುಮಾರು ೯-೦೦ ಗಂಟೆಯ ಸಮಯದಲ್ಲಿ ಕಂಠೀರವ ನಗರ ಪ್ರಸಾದ್ ಟಿಫಿನ್ ರೂಮಿನ ಮ್ಯಾನೇಜರ್‌ರವರು ತಮ್ಮ ಟಿಫಿನ್ ರೂಮಿನಲ್ಲಿ ವ್ಯಕ್ತಿ ಸತ್ತಿರುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಮಹಾಲಕ್ಷ್ಮಿ ಬಡಾವಣೆಯ ಪೋಲೀಸ್ ಠಾಣೆಯಲ್ಲಿ ಐ.ಪಿ.ಸಿ. ಯ ೩೦೨ ಅಧಿನಿಯಮದ ಅಡಿಯಲ್ಲಿ ಗುನ್ನೆ ನಂ. ೨೬೪:೮೬ ಪ್ರಕರಣವನ್ನು ದಾಖಲು ಮಾಡಿಕೊಳ್ಳಲಾಯಿತು. ಮರಣ ಹೊಂದಿದ ೩೪ ವರ್ಷದ ಶ್ರೀ ಮಂಜುನಾಥ ಮತ್ತು ಆಪಾದಿತ ೨೧ ವರ್ಷದ ಶ್ರೀ ರಾಮಕೃಷ್ಣ ಇಬ್ಬರು ಆಟೋರಿಕ್ಷಾ ಚಾಲಕರಾಗಿದ್ದು, ಆಟೋರಿಕ್ಷಾ ಕೊಳ್ಳುವ ವ್ಯವಹಾರದಲ್ಲಿ ಪಾಲುಗಾರರಾಗಿದ್ದರು. ಮಂಜುನಾಥರವರು ರಾಮಕೃಷ್ಣರವರಿಗೆ ರೂ. ೫,೦೦೦-೦೦ ಗಳನ್ನು ಕೊಟ್ಟು ಇದನ್ನು ಹಿಂದಿರುಗಿಸಲು ತಗಾದಿ ಮಾಡುತ್ತಿದ್ದರು. ಇವರು ಹಣವನ್ನು ಕೊಡಲು ನಿರಾಕರಿಸಿದರು. ಆದ್ದರಿಂದ ರಾಮಕೃಷ್ಣರವರು ಕುಪಿತರಾಗಿ ಇವರಿಬ್ಬರು ಕಂಠೀರವ ಸ್ಟುಡಿಯೋಗೆ ಹೋಗುತ್ತಿದ್ದಾಗ ಪ್ರಸಾದ್ ಟಿಫಿನ್ ರೂಮಿನ ಹತ್ತಿರ ರಾಮಕೃಷ್ಣರವರು ಮಂಜುನಾಥರವರನ್ನು ಚಾಕುವಿನಿಂದ ಹಿಂದಿನಿಂದ ತಿವಿದರು. ತಕ್ಷಣ ಮಂಜುನಾಥರವರು ಆಟೋರಿಕ್ಷಾದಲ್ಲಿ ಕುಳಿತು ಟಿಫಿನ್ ರೂಮಿನ ಹತ್ತಿರ ಹೋದರು. ರಾಮಕೃಷ್ಣರವರು ಅವರನ್ನು ಹಿಂಬಾಲಿಸಿ ಮತ್ತು ಮಂಜುನಾಥರವರ ಕತ್ತಿಗೆ ತಿವಿದರು ತಕ್ಷಣ ಅದರಿಂದಾಗಿ ಮಂಜುನಾಥರವರು ಮೃತಪಟ್ಟರು. ಪೋಲೀಸರು ತಕ್ಷಣ ದಿನಾಂಕ: ೧೨-೮-೮೬ ರಂದೇ ರಾಮಕೃಷ್ಣರನ್ನು ಬಂಧಿಸಿ ೧೩-೮-೮೬ರಂದು ನ್ಯಾಯಾಲಯದ ಮುಂದೆ ಹಾಜರ್‌ಪಡಿಸಿದರು. ಆರೋಪಿಯು ೩೦-೮-೮೬ ರವರೆಗೆ ನ್ಯಾಯಾಂಗದ ವಶದಲ್ಲಿ ಇರುವರು. ಸ್ಥಳದಲ್ಲಿ ಹಾಜರಿದ್ದ ಸಾಕ್ಷಿಯನ್ನು ಪರಿಶೀಲಿಸಲಾಯಿತು. ಫೋರೆಸಿಕ್ ಸೈನ್ಸ್ ಲಾಬೊರೇಟರಿಯಿಂದ ವರದಿ ಬಂದ ತಕ್ಷಣ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು.

ಶ್ರೀ ದಿವಾಕರ ಹೆಗ್ಡೆ, ಕೆ. ಬಾಬು ಹೆಗ್ಡೆಯವರ ಮಗ ೨೪ ವರ್ಷ ವಯಸ್ಸಿನ ಇವರು ನಾರಾಯಣಪುರ ಹಳ್ಳಿ (ಕೋತನೂರು), ಬೆಂಗಳೂರು ನಗರದಲ್ಲಿ ವಾಸಿಸುತ್ತಿದ್ದರು. ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಸಮೀಪದ ಹೆಬ್ರಿಹಳ್ಳಿಯಿಂದ ಬಂದವರು.

ಶ್ರೀ ದಿವಾಕರ ಹೆಗ್ಡೆಯವರು ಅನೇಕ ಕಾಲೇಜುಗಳಲ್ಲಿ ಮತ್ತು ಜ್ಞಾನ ಭಾರತಿಯಲ್ಲಿ ವಿದ್ಯಾರ್ಥಿ ಚಟುವಟಿಕೆಗಳಲ್ಲಿ ಭಾಗವಹಿಸುವುದಲ್ಲದೆ ರೌಡಿಗಳ ಸಹಾಯದಿಂದ ಭಯಾನಕ ವಾತಾವರಣ ನಿರ್ಮಿಸುತ್ತಿದ್ದರು. ೧೯೮೩ರಿಂದ ೬-೮-೧೯೮೬ರಲ್ಲಿ ಮರಣ ಹೊಂದುವ ತನಕ ಎಲ್ಲಾ ವಿದ್ಯಾರ್ಥಿ ಚಟುವಟಿಕೆಗಳಲ್ಲಿಯೂ ಭಾಗವಹಿಸುತ್ತಿದ್ದರು. ಮತ್ತು ನಾಯಕತ್ವ ವಹಿಸುತ್ತಿದ್ದರು. ಇವರು ೭ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಆಪಾದನೆಯನ್ನು ಎದುರಿಸುತ್ತಿದ್ದಾರೆ. ಇವರ ಬಗ್ಗೆ ಹೈಗ್ರೌಂಡ್ಸ್ ಮತ್ತು ಜ್ಞಾನಭಾರತಿ ಪೋಲೀಸ್ ಠಾಣೆಗಳಲ್ಲಿ ರೌಡಿ ಷೀಟ್ಸ್‌ಗಳನ್ನು ತೆರೆಯಲಾಗಿದೆ. ೧೯೮೫-೮೬ರಲ್ಲಿ ಬಿ. ಕಾಂ. ಪದವಿಯನ್ನು ಮುಗಿಸಿ ಅನೇಕ ಪ್ರಯತ್ನಗಳ ನಂತರ ಜ್ಞಾನಭಾರತಿಯಲ್ಲಿ ಸ್ನಾತಕೋತ್ತರ ತರಗತಿಗೆ (ತತ್ವಶಾಸ್ತ್ರ) ಸೇರಿಕೊಂಡಿದ್ದಾರೆ.

ದಿನಾಂಕ ೧೬-೨-೧೯೮೬ರಂದು ಕರ್ನಾಟಕ ಗೂಂಡಾ ಕಾಯಿದೆಯ ನಿಯಮ ಇವರನ್ನು ಬೆಂಗಳೂರು ನಗರ ಪೋಲೀಸ್ ಕಮಿಷನರವರು ನಿರ್ಬಂದ ಆಜ್ಞೆಯನ್ನು ಹೊರಡಿಸಿ ಬಳ್ಳಾರಿ ಜಿಲ್ಲೆಯಲ್ಲಿ ದಿನಾಂಕ ೧-೩-೧೯೮೬ರ ತನಕ ಬಂಧನದಲ್ಲಿ ಇದ್ದರು. ಶ್ರೀ ದಿವಾಕರ ಹೆಗ್ಡೆಯವರ ಅಣ್ಣ ಶ್ರೀ ಮೋಹನ್ ದಾಸ್. ಹೆಗ್ಡೆಯವರು (ದೈಹಿಕ ಶಿಕ್ಷಣ, ಸಿದ್ಧಾರ್ಥ ಕಾಲೇಜು, ನಾರಾಯಣಪುರ, ಬೆಂಗಳೂರು ನಗರ) ಇವರು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಹೆಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸುವುದರ ಮೂಲಕ ನ್ಯಾಯಾಲಯ ದಿವಾಕರ ಹೆಗ್ಡೆಯವರನ್ನು ಬಿಡುಗಡೆ ಮಾಡಿದ್ದರು.

ಇವರ ಮೇಲೆ ಕ್ರಿಮಿನಲ್ ಮೊಕದ್ದಮೆಗಳು ಇರುವುದರ ಬಗ್ಗೆ ಸಂಕ್ಷಿಪ್ತ ಟಿಪ್ಪಣಿಯನ್ನು ಈ ಕೆಳಗೆ ಕೊಡಲಾಗಿದೆ.

೧) ಉಪ್ಪಾರಪೇಟೆ ಪೋಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ. ೨೨೫:೮೩ ಕಲಂ ೪೯೨ ಭಾ. ದಂ. ಸಂ.

ದಿನಾಂಕ ೧೨-೪-೧೯೮೩ ರಂದು ರಾತ್ರಿ ೧-೦೦ ಗಂಟೆಯ ಸಮಯದಲ್ಲಿ ಶ್ರೀ ದಿವಾಕರ ಹೆಗ್ಡೆಯವರು ತಮ್ಮ ಸಹಚರರಾದ ಜಯರಾಜ್, ಚಂದ್ರಶೇಖರ್, ಮಂಜುನಾಥ್, ರಾಮಣ್ಣ ಇವರೊಂದಿಗೆ ಉಪ್ಪಾರಪೇಟೆಯಲ್ಲಿರುವ ಸಂಧ್ಯ ಹೋಟೆಲಿನ ರೂಂ. ನಂ. ೩೦೯ಕ್ಕೆ ನುಗ್ಗಿ ಒಂದು ಕೈಗಡಿಯಾರ, ಚಿನ್ನದ ಸರ, ರೂ. ೫೦೦ ಇವುಗಳನ್ನು ಈ ರೂಮಿನಲ್ಲಿ ತಂಗಿದ್ದ ದಾವಣಗೆರೆಯ ಮಂಜುನಾಥ್ ರವರಿಗೆ ಮಾರಕಾಸ್ತ್ರಗಳಿಂದ ಹೆದರಿಸಿ ದೋಚಿಕೊಳ್ಳಲಾಯಿತು. ಇದರ ಬಗ್ಗೆ ಆಪಾದನ ಪಟ್ಟಿಯನ್ನು

ಕಲಂ ೪೪೮, ೫೯೮, ೧೪೮ ಭಾ. ದಂ. ಸಂ. ಯ ಪ್ರಕಾರ ಮೂರನೆಯ ಎಂ. ಎಂ. ನ್ಯಾಯಾಲಯದಲ್ಲಿ ದಿನಾಂಕ ೨೩-೪-೧೪ರಂದು ಸಲ್ಲಿಸಲಾಯಿತು. ಇದು ಸಿ. ಸಿ. ನಂ. ೧೧೩೮:೮೩ರಲ್ಲಿ ದಾಖಲಾಗಿದ್ದು ವಿಚಾರಣಾ ಹಂತದಲ್ಲಿದೆ.

೨) ಸೆಂಟ್ರಲ್ ಪೋಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ ೨೨೮:೮೩ ಕಲಂ ೧೪೩, ೧೪೭ ೧೪೮ ೩೨೪ ಮತ್ತು ೫೦೬ ಭಾ. ದಂ. ಸಂ.

ದಿನಾಂಕ ೩೦-೭-೧೪ರಂದು ಮಲ್ಲಣ್ಣ, ರಾಜಣ್ಣ, ಶಿವರಾಮು ಮತ್ತು ಕೆಲವರು ಮಾರ ಕಾಸ್ತ್ರಗಳನ್ನು ಹೊಂದಿ ಅಕ್ರಮ ಕೂಟ ಸೇರಿ ಆರ್. ವಿ. ಹರೀಶ ಮತ್ತು ಅಪರ ಗುಂಪಿನ ಕೆಲವರಿಗೆ ಹೊಡೆದು ಗಾಯಗೊಳಿಸಲಾಯಿತು. ವಿ.ವಿ. ಪುರಂ ಕಾಲೇಜಿನ ವಿದ್ಯಾರ್ಥಿ ಸಂಘಕ್ಕೆ ನಡೆದ ಚುನಾವಣಾ ಸಮಯದಲ್ಲಿ ಈ ಘಟನೆ ಸಂಬಂಧಿಸಿದ್ದು, ಆರ್.ವಿ. ಹರೀಶ ಮತ್ತು ಪಿ. ಶ್ರೀನಿವಾಸ ಇವರು ಗಾಯಾಳು ಗಳಾದರು. ತನಿಖೆಯ ಕಾಲದಲ್ಲಿ ಶ್ರೀ ದಿವಾಕರ ಹೆಗ್ಡೆ ಮತ್ತು ಬೆಂಬಲಿಗರಾದ ರಾಜಣ್ಣ ಇವರು ಈ ಅಪರಾಧ ಮಾಡುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂಬುದು ಗೊತ್ತಾಯಿತು.

ದಿನಾಂಕ ೩೧-೭-೧೪ರಂದು ಮಲ್ಲಣ್ಣ ಮತ್ತು ಶಿವರಾಮುರವರನ್ನು ಬಂಧಿಸಿದ್ದಲ್ಲದೆ ದಿನಾಂಕ ೧೦-೮-೧೪ರಂದು ಶ್ರೀ ದಿವಾಕರ ಹೆಗ್ಡೆ ಮತ್ತು ರಾಜಣ್ಣರವರನ್ನು ಬಂಧಿಸಲಾಯಿತು. ತನಿಖೆಯ ನಂತರ ೩೦-೧೦-೧೪ರ ರಂದು ಕಲಂ ೧೪೩, ೧೪೭, ೧೪೪, ೩೨೪, ೪೨೭, ಮತ್ತು ೫೦೬ ಭಾ. ದಂ. ಸಂ. ಯ ಪ್ರಕಾರ ೨ನೆಯ ಎಂ. ಎಂ. ನ್ಯಾಯಾಲಯದಲ್ಲಿ ಆಪಾದನೆ ಪಟ್ಟಿ ಸಲ್ಲಿಸಿ ಆದನ್ನು ಸಿ. ಸಿ. ನಂ. ೨೮೪:೮೩ ರಲ್ಲಿ ದಾಖಲು ಮಾಡಿಕೊಳ್ಳಲಾಯಿತು. ನಂತರ ಇದನ್ನು ೨ನೆಯ ಅಪರ ಸಿ. ಎಂ. ಎಂ. ನ್ಯಾಯಾಲಯಕ್ಕೆ ೪-೩-೧೪ರಂದು ವರ್ಗಾಯಿಸಲಾಗಿದ್ದು ಸಿ. ಸಿ. ನಂ. ೧೧೩೬:೮೫ ರಲ್ಲಿ ವಿಚಾರಣಾ ಹಂತದಲ್ಲಿದೆ.

೩) ಜ್ಞಾನಭಾರತಿ ಪೋಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ. ೪೯೮:೮೩ ಕಲಂ ೪೪೮ ೫೦೬ ಮತ್ತು ೩೪ ಭಾ. ದಂ. ಸಂ.

ದಿನಾಂಕ ೨೧-೧೧-೧೪ರಂದು ಸುಮಾರು ೧-೩೦ ಗಂಟೆಯ ಸಮಯದಲ್ಲಿ ದಿವಾಕರ ಹೆಗ್ಡೆ ಮತ್ತು ಅವರ ಸಹಚರರಾದ ಗುರಪ್ಪನಾಯ್ಡು ಮತ್ತು ಇತರರೊಂದಿಗೆ ಬೆಂಗಳೂರು ವಿಶ್ವವಿದ್ಯಾ ನಿಲಯದ ಉಪ ಕುಲಪತಿಗಳ ಕೊಠಡಿಗೆ ಆಕ್ರಮವಾಗಿ ಪ್ರವೇಶಿಸಿ ಶ್ರೀಯುತ ಡಾ. ಎಂ. ಎಸ್. ವಿಶ್ವನಾಥಯ್ಯ, ಉಪಕುಲಪತಿಗಳು, ತನಗೆ ತತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಗೆ ಪ್ರವೇಶ ಕೊಡದಿದ್ದಲ್ಲಿ ಘೋರ ಪರಿಣಾಮ ಎದುರಿಸಬೇಕಾಗಬಹುದೆಂದು ಹೆದರಿಸಿ ತನಗೆ ಪ್ರವೇಶ ಕೊಡ ಬೇಕೆಂದು ಬಲತ್ಕರಿಸಿದ. ಆದರೆ ಇವರ ಪ್ರವೇಶ ಪತ್ರ ನಿಗಧಿಪಡಿಸಿದ ಕೊನೆಯ ತಾರೀಖಿನ ನಂತರ ಬಂದಿದ್ದರಿಂದ ನಿರಾಕರಿಸಲಾಗಿತ್ತು. ಇವರನ್ನು ದಿನಾಂಕ ೨೩-೧೧-೧೪ರ ರಂದು ಬಂಧಿಸಲಾಯಿತು. ದಿನಾಂಕ ೩೦-೪-೧೪ರ ರಂದು ಕಲಂ. ೪೪೮, ೫೦೬ ಮತ್ತು ೩೪ ಭಾ. ದಂ. ಸಂ. ಯ ಪ್ರಕಾರ ಅಪಾದನ ಪಟ್ಟಿಯನ್ನು ೩ನೇ ಎಂ. ಎಂ. ನ್ಯಾಯಾಲಯದಲ್ಲಿ ಸಲ್ಲಿಸಿ ಆದನ್ನು ಸಿ.ಸಿ. ನಂ. ೨೯೪:೮೪ರಲ್ಲಿ ದಾಖಲು ಮಾಡಿಕೊಳ್ಳಲಾಯಿತು ಇದು ವಿಚಾರಣಾ ಹಂತದಲ್ಲಿದೆ.

೪) ಉಪ್ಪಾರಪೇಟೆ ಪೋಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ. ೭೪೨:೮೪ ಕಲಂ ೩೨೪ ಮತ್ತು ೩೪ ಭಾ. ದಂ. ಸಂ.

ದಿನಾಂಕ ೨೨-೧೦-೧೪ರ ರಂದು ಸಂಜೆ ೮-೦೦ ಗಂಟೆ ಹೊತ್ತಿಗೆ ಶ್ರೀ ದಿವಾಕರ ಹೆಗ್ಡೆ ಮತ್ತು ಅವರ ಸಹಚರರಾದ ಪಿ. ಎಂ. ರಮೇಶ್, ಶಿವಕುಮಾರ್ ಮತ್ತು ಲಿಂಗರಾಜ ಇವರು ಜೊತೆಗೂಡಿ ಗಾಂಧೀನಗರದಲ್ಲಿರುವ ಕಾನಿಷ್ಕ ಹೋಟೆಲಿನ ಬಳಿ ಶ್ರೀಯುತ ಆಫ್ರೋಸ್‌ಖಾನ್ ಎಂಬುವವರಿಗೆ ಕಬ್ಬಿಣದ ಸಲಾಕೆ, ರೇಜರ್ ಇವುಗಳಿಂದ ಗಾಯಗೊಳಿಸಿದರು. ಶ್ರೀ ದಿವಾಕರ ಹೆಗ್ಗಡೆ ಅವರನ್ನು ತಾ. ೧೪-೧೦-೮೪ರಂದು ಬಂಧಿಸಿ ಪೂರ್ಣ ತನಿಖೆ ನಂತರ ೩ನೇ ಎಂ. ಎಂ. ನ್ಯಾಯಾಲಯದಲ್ಲಿ ಕಲಂ ೩೨೪ ಮತ್ತು ೩೪ ಭಾ. ದಂ. ಸಂ. ಪ್ರಕಾರ ತಾ. ೧೭-೧೧-೮೪ ರಂದು ಸಲ್ಲಿಸಿ ಸಿ. ಸಿ. ನಂ. ೩೯೪:೮೪ ರಲ್ಲಿ ವಿಚಾರಣಾ ಹಂತದಲ್ಲಿ ಇದೆ.

೫) ಜ್ಞಾನಭಾರತಿ ಪೋಲೀಸ್ ಠಾಣೆ ಅಪರಾಧ ಸಂಖ್ಯೆ ೮೧:೮೪ ಕಲಂ ೧೪೫, ೧೪೪, ೩೯೭ ಭಾ. ದಂ. ಸಂ ಮತ್ತು ಕಲಂ ೨೭ ಭಾರತ ಆರಮ್ಸ್ ಆಕ್ಟ್.

ತಾ : ೨೪-೧೦-೮೪ ರಂದು ರಾತ್ರಿ ಸುಮಾರು ೮ ಗಂಟೆ ೧೦ ನಿಮಿಷ ಸಮಯದಲ್ಲಿ ಶ್ರೀ ದಿವಾಕರ ಹೆಗ್ಡೆ ಮತ್ತು ಅವರ ಸಹಚರರಾದ ರಮೇಶ್, ಶಿವಶಂಕರ್, ಸುಂದರ ಕುಮಾರ, ಶ್ರೀನಿವಾಸ, ಲಿಂಗರಾಜು, ರಾಜು ಮತ್ತು ಸುರೇಶ್ ಇವರುಗಳು ಜೊತೆ ಸೇರಿ ಒಂದು ಕಾರಿನಲ್ಲಿ ಮಲ್ಲತ್ತಹಳ್ಳಿ ಆಪ್ತರಸ್ತೆ ಸಮೀಪ ಸೇರಿ ಸಮಾನ ಉದ್ದೇಶದಿಂದ ಜ್ಞಾನ ಭಾರತಿ ವಿಶ್ವವಿದ್ಯಾ ನಿಲಯದ ಆವರಣದಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆ ಸಂದರ್ಭದಲ್ಲಿ ತಾ : ೩೧-೧೦-೮೪ ರಂದು ಶಾಂತಿಭಂಗ ಮಾಡಲು ಪ್ರಯತ್ನಿಸಿದರು. ಈ ಕಾರನ್ನು ನಿಲ್ಲಿಸಲು ಪೋಲೀಸರು ಪ್ರಯತ್ನಿಸಿದಾಗ ಪೋಲೀಸ್ ಅಧಿಕಾರಿಗಳ ಮೇಲೆ ರಿವಲ್ವಾರ್ ತೋರಿಸುವುದರ ಮುಖಾಂತರ ಹೆದರಿಸಲಾಯಿತು. ಆದರೂ ಪೋಲೀಸರು ಕಾರನ್ನು ಹಿಂಬಾಲಿಸಿ ಶ್ರೀ ದಿವಾಕರ ಹೆಗ್ಡೆ ಅವರು ಮತ್ತು ಸಹಚರರನ್ನು ಬಂಧಿಸಲಾಯಿತು. ಹಾಗೂ ಕಾರನ್ನು ಅಮಾನತ್ತುಪಡಿಸಲಾಯಿತು. ಈ ಮೊಕದ್ದಮೆಯನ್ನು ತನಿಖೆ ನಂತರ ೩ ನೇ ಎಂ. ಎಂ. ನ್ಯಾಯಾಲಯದಲ್ಲಿ ಕಲಂ ೧೪೫, ೧೪೪, ೧೪೯, ೧೪೭, ೩೫೫, ೫೦೬(ಬಿ) ಭಾ. ದಂ. ಸಂ. ಪ್ರಕಾರ ಆಪಾದನಾ ಪಟ್ಟಿಯನ್ನು ಸಲ್ಲಿಸಿದ್ದು, ಸಿ. ಸಿ. ಕ್ರ. ಸಂಖ್ಯೆ : ೪೧೧೧:೮೫ ರಲ್ಲಿ ವಿಚಾರಣಾ ಹಂತದಲ್ಲಿ ಇದೆ.

೬) ಭಾರತೀ ನಗರ ಪೋಲೀಸ್ ಠಾಣೆ ಕ್ರಮ ಸಂಖ್ಯೆ ೩೮೧:೮೫ ಕಲಂ ೪೪೮, ೩೦೬, ೩೬೫ ಮತ್ತು ೩೪೨ ಭಾ. ದಂ. ಸಂ.

ತಾ : ೫-೧೨-೮೫ ರಂದು ಬೆಳಿಗ್ಗೆ ೧೧ರ ಸುಮಾರಿನಲ್ಲಿ ಶ್ರೀ ದಿವಾಕರ ಹೆಗ್ಡೆ ಮತ್ತು ಅವರ ಸಹಚರರಾದ ರೇಜರ್ ಲತೀಫ್, ಮಹದೇವ, ಎಲೋಜಿರಾವ್, ಮಲ್ಕ್ ಆಲಿ, ಮಸೂದ್ ಆಲಿ, ರೆಹಮಾನ್, ಸಿಂಟೂ ಟಾರ್‌ಜಾನ್ ಮತ್ತು ರಾಜಾ ಇವರೊಡಗೂಡಿ ಅಕ್ರಮವಾಗಿ ಶ್ರೀಯುತ ಜಬರ್ ಚಂದ್ ಇವರ ಅಂಗಡಿಗೆ ಪ್ರವೇಶಿಸಿ ಬಲಾತ್ಕಾರವಾಗಿ ಶ್ರೀಯುತ ಜಬರ್ ಚಂದ್ ಇವರನ್ನು ಕಾರಿನಲ್ಲಿ ಅಪಹರಿಸಿಕೊಂಡು ಶ್ರೀಹರಿನಗರ ಬೆಂಗಳೂರು ದಕ್ಷಿಣ ತಾಲ್ಲೂಕಿನ ಕಡೆಗೆ ಹಣವನ್ನು ದೋಚುವ ಉದ್ದೇಶದಿಂದ ತೆಗೆದುಕೊಂಡು ಹೋಗಲಾಯಿತು ಮತ್ತು ಅವರನ್ನು ಅಕ್ರಮವಾಗಿ ನಿರ್ಬಂಧದಲ್ಲಿ ಇರಿಸಿ ಥಳಿಸಲಾಯಿತು. ಈ ಸಂಬಂಧದಲ್ಲಿ ಭಾರತೀನಗರ ಪೋಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ ೩೮೧:೮೫, ಕಲಂ ೪೪೮, ೩೦೬, ೩೬೫ ಮತ್ತು ೩೪೨ ಭಾ. ದಂ. ಸಂ. ಪ್ರಕಾರ ಮೊಕದ್ದಮೆ ದಾಖಲು ಮಾಡಿ ತಾ : ೫-೧-೮೬ ರಂದು ನ್ಯಾಯಾಲಯದಲ್ಲಿ ಸಿ. ಸಿ. ನಂ. ೨೯೫:೮೬ ರಲ್ಲಿ ದಾಖಲು ಮಾಡಿಕೊಂಡು ವಿಚಾರಣಾ ಹಂತದಲ್ಲಿ ಇದೆ. ವಿಚಾರಣೆಯು ಮುಂದಿನ ದಿನಾಂಕ ೨೬-೨-೮೬ ಎಂದು ನಿಗದಿ ಪಡಿಸಲಾಗಿದೆ.

೭) ಉಪ್ಪಾರ ಪೇಟೆ ಪೋಲೀಸ್ ಠಾಣೆ ಅಪರಾಧ ಸಂಖ್ಯೆ : ೫೮೭:೮೫, ಕಲಂ ೩೫೫, ೩೦೭, ಭಾ. ದಂ. ಸಂ. ಮತ್ತು ೨೭ ಭಾರತೀಯ ಆರಮ್ಸ್ ಆಕ್ಟ್.

ತಾ : ೬-೧೨-೮೫ ರಂದು ಸುಮಾರು ೨-೩೦ ಗಂಟೆ ಸಮಯದಲ್ಲಿ ಶ್ರೀ ದಿವಾಕರ ಹೆಗ್ಡೆ ಅವರ ಸಹಚರರಾದ ರೇಜರ್ ಲತೀಫ್, ಕುಮಾರ, ಮಹದೇವನ್, ಗುರುಪ್ರಸಾದ್, ಕೆ. ವೇಣುಗೋಪಾಲ ಉ : ಆನಂದ, ಸದಾನಂದ ಪಾರ್ಥಪ್ಪ, ಸೂರಿ ಮತ್ತು ಬಿ. ಕೆ. ಜೀವಶೆಟ್ಟಿ ಇವರು ಕೂಡಿಕೊಂಡು ಶ್ರೀಯುತ ಮುನಿರತ್ನಂ ನಾಯ್ಡು ಪೋಲೀಸ್ ಸಬ್ ಇನ್ಸ್‌ಪೆಕ್ಟರ್, ಶಾಂತಿ ಮತ್ತು ಸುವ್ಯವಸ್ಥೆ, ಭಾರತೀ ನಗರ ಪೋಲೀಸ್ ಠಾಣೆ ಮೆತ್ತು ಅವರ ಸಿಬ್ಬಂದಿಯನ್ನು ರೂ. ನಂ. ೨೧೭, ಗುಪ್ತಲಾರ್ಡ್ಸ್, ಕೆಂಪೇಗೌಡ ರಸ್ತೆ, ಬೆಂಗಳೂರು ಇಲ್ಲಿ ತಳಿಸಲಾಯಿತು. ಪೋಲೀಸ್ ಪಜೆ ಇವರನ್ನು ದಸ್ತಗಿರಿ ಮಾಡಲು ಪ್ರಯತ್ನಿಸಿದ್ದಲ್ಲದೆ, ಅಪರಾಧ ಕ್ರಮ ಸಂಖ್ಯೆ ೩೮೧:೮೫, ಕಲಂ ೪೪೮, ೩೦೬, ೩೬೫, ೩೪೨ ಭಾ. ದಂ. ಸಂ. ಪ್ರಕಾರ ಮೊಕದ್ದಮೆ ದಾಖಲು ಮಾಡಿದರು. ಈ ಅಪರಾಧಿಗಳು ಪೋಲೀಸ್ ಠಾಣಾಧಿಕಾರಿಯನ್ನು ಥಳಿಸಿದ್ದೂ ಅಲ್ಲದೆ ಕೊಲೆ ಮಾಡಲು ರಿವಲ್ವಾರ್‌ನ ಮುಖಾಂತರ ಗುಂಡು ಹಾರಿಸಲು ಪ್ರಯತ್ನಿಸಲಾಯಿತು. ಈ ಮೊಕದ್ದಮೆಯಲ್ಲಿ ದಿವಾಕರ ಹೆಗ್ಡೆ ಮತ್ತು ಸಹ ಚರರನ್ನು ತಾ: ೬-೧೨-೮೫ ರಂದು ಬಂಧಿಸಲಾಯಿತು. ಈ ಮೊಕದ್ದಮೆ ಮುದ್ದೆ ಗುಂಡು ಪರಿಣತರ ಅಭಿಪ್ರಾಯಕ್ಕಾಗಿ ಕೇಳಲಾಗಿದ್ದು, ಇನ್ನೂ ವಿಚಾರಣಾ ಹಂತದಲ್ಲಿ ಇದೆ.

ತಾ: ೬-೮-೧೯೮೬ ರಂದು ಸಂಜೆ ೬-೩೦ ಗಂಟೆಗೆ ಉಪ್ಪಾರಪೇಟೆ ಪೋಲೀಸ್ ಠಾಣೆಗೆ ಶ್ರೀ ದಿವಾಕರ ಹೆಗ್ಡೆ ಅವರನ್ನು ಸುಮಾರು ೬ ರಿಂದ ೮ ಜನ ಕೊಲೆ ಮಾಡಲಾಯಿತೆಂದು ಬಂದ ವರ್ತಮಾನದ ಪ್ರಕಾರ ಪೋಲೀಸರು ಕೆಲವೇ ಕ್ಷಣಗಳಲ್ಲಿ ಸ್ಥಳಕ್ಕೆ ಧಾವಿಸಿದರು. ಅಪರಾಧಿಗಳು ಪರಾರಿಯಾಗಿದ್ದರು. ಈ ಘಟನೆ ಕೆಲವೇ ಕ್ಷಣಗಳಲ್ಲಿ ನಡೆದುಹೋಗಿದ್ದು, ಸ್ಥಳಕ್ಕೆ ಧಾವಿಸಿದಾಗ ಅಪರಾಧ ನಡೆದ ಸ್ಥಳದಲ್ಲಿ ಇರಿತದ ಮತ್ತು ಮಚ್ಚಿನಿಂದ ಆದ ಗಾಯಗಳಿಂದ ಕೂಡಿದ ದಿವಾಕರ ಹೆಗ್ಡೆ ಅವರ ದೇಹ ಇತ್ತು. ಈ ಘಟನೆ ಗಾಂಧಿನಗರದ ಕುರುಬರ ಹಾಸ್ಟೆಲ್ ಹಿಂದೆ ಇರುವ ಮತ್ತು ಮುರಾರಿ ಮಂಡಳದ ಮುಂದೆ ಇರುವ ೨ನೇ ಅಡ್ಡದಾರಿಯಲ್ಲಿ ನಡೆದಿತ್ತು. ತನಿಖಾ ಕಾಲದಲ್ಲಿ ಈ ಘಟನೆಯು ಹಿಂದಿದ್ದ ದ್ವೇಷದಿಂದ ನಡೆದಿದ್ದು ಎಂಬುದು ಗೊತ್ತಾಯಿತು. ಒಂದು ದಿನದ ಹಿಂದೆ ತಂಬಿ ಉ: ಪಾರ್ಥಸಾರಥಿ ಎಂಬುವರಿಗೆ, ೨ ದಿನಗಳ ಹಿಂದೆ ಲಕ್ಷ್ಮಿನಾರಾಯಣ ಎಂಬುವವರಿಗೂ ದಿವಾಕರ ಹೆಗ್ಡೆ ಅವರು ಹೊಡೆದಿದ್ದು ಅಲ್ಲದೆ ೨ನೇಯವರ ಮೋಟಾರ್ ಸೈಕಲ್ ಕಿತ್ತುಕೊಂಡು ಅಪರಾಧ ನಡೆಯುವ ಕಾಲದವರೆಗೂ ಸ್ವತಃ ಅವರೇ ನಡೆಸುತ್ತಾ ಇದ್ದರು. ಇದಲ್ಲದೆ ಶ್ರೀ ದಿವಾಕರ ಹೆಗ್ಡೆ ಅವರು ಬಳ್ಳಾರಿ ಜೈಲಿನಲ್ಲಿ ಬಂಧಿಯಾಗಿ ಇದ್ದ ಸಮಯದಲ್ಲಿ ಶ್ರೀಯುತ ಸಿ. ಟಿ. ಶ್ರೀನಿವಾಸ ಅವರು ದಿವಾಕರ ಹೆಗ್ಡೆ ಅವರ ಹೆಸರಿನಲ್ಲಿ ಅನೇಕರಿಂದ ಭಾರಿ ಮೊತ್ತದ ಹಣವನ್ನು ಪಡೆಯಲಾಯಿತು ಎಂದು ತಿಳಿದಿದ್ದರ ಮೇರೆಗೆ ದಿವಾಕರ ಹೆಗ್ಡೆ ಅವರು ಸಿ. ಟಿ. ಶ್ರೀನಿವಾಸರಿಗೆ ಹಣವನ್ನು ಕೂಡಲೇ ವಾಪಸ್ ತನಗೆ ಕೊಡಬೇಕೆಂದು ಗದರಿಸಿದ್ದರು. ಈ ಎಲ್ಲಾ ಕಾರಣಗಳಿಂದ ಮೇಲಿನ ಅಪರಾಧಿಗಳು ಜೊತೆಗೂಡಿ ಮತ್ತು ಒಟ್ಟಿಗೆ ಸಂಚು ಹೂಡಿ ದಿವಾಕರ ಹೆಗ್ಡೆ ಅವರನ್ನು ಇತರ ಸಹಚರರಾದ ಕುಟ್ಟಿ, ರಾಜಶೇಖರ, ಹರೀಶ್ ಮತ್ತು ಸುರೇಶ ಇವರು ಕೂಡಿ ದಿವಾಕರ ಹೆಗ್ಡೆ ಇವರನ್ನು ಕೊಲೆ ಮಾಡಲಾಯಿತು.

ಈಗಾಗಲೇ ಶ್ರೀಯುತ ತಂಬಿ ಉ: ಪಾರ್ಥಸಾರಥಿ, ಹರೀಶ್ ಮತ್ತು ಸುರೇಶ ಉ: ರೌಡಿ ೧೦೦ ಇವರನ್ನು ದಸ್ತಗಿರಿ ಮಾಡಲಾಗಿದೆ. ಉಳಿದ ಅಪರಾಧಿಗಳಾದ ಶ್ರೀಯುತ ಸಿ. ಟಿ. ಶ್ರೀನಿವಾಸ, ಕುಟ್ಟಿ, ರಾಜಶೇಖರ ಮತ್ತು ಲಕ್ಷ್ಮಿನಾರಾಯಣ ಇವರನ್ನು ದಸ್ತಗಿರಿ ಮಾಡಲು ಪ್ರಯತ್ನಗಳನ್ನು ಮುಂದುವರಿಸಲಾಗಿದೆ.

ಮಹಾಲಕ್ಷ್ಮಿ ಬಡಾವಣೆಯ ಕಂಠೀರವಾ ಸ್ಟುಡಿಯೋದ ಹತ್ತಿರ ನಡೆದ ಆಟೋರಿಕ್ಷಾ ಚಾಲಕನ ಕೊಲೆಯ ಬಗ್ಗೆ ಟಿಪ್ಪಣಿ

ದಿನಾಂಕ ೧೨-೮-೧೯೮೬ ರಂದು ರಾತ್ರಿ ಸುಮಾರು ೯-೦೦ ಗಂಟೆ ಸಮಯದಲ್ಲಿ ಶ್ರೀಯುತ ಬಿ. ಕೃಷ್ಣಪ್ಪ, ಮ್ಯಾನೇಜರ್, ಪ್ರಸಾದ್ ಟಿಫಿನ್ ರೂಂ, ಕಂಠೀರವ ನಗರ, ರವರು ಮಹಾಲಕ್ಷ್ಮಿ ಬಡಾವಣೆಯ ಪೋಲೀಸ್ ಠಾಣೆಗೆ ದೂರವಾಣಿಯ ಮುಖಾಂತರ ತಮ್ಮ ಟಿಫಿನ್ ರೂಂನಲ್ಲಿ ಅಪರಿಚಿತ ರೊಬ್ಬರು ಖೂನಿಯಾಗಿದೆ ಎಂಬ ದೂರಿನ ಪ್ರಕಾರ ಪೋಲೀಸರು ತಕ್ಷಣ ಸ್ಥಳಕ್ಕೆ ಧಾವಿಸಿದರು. ಮತ್ತು ತಮ್ಮ ಪೋಲೀಸ್ ಠಾಣೆಯಲ್ಲಿ ಅಪರಾಧ ಕ್ರಮ ಸಂಖ್ಯೆ ೨೬೪/೮೬ ಕಲಂ ೩೦೨ ಭಾ. ದಂ. ಸಂ. ಯ ಪ್ರಕಾರ ಮೊಕದ್ದಮೆ ದಾಖಲು ಮಾಡಿಕೊಂಡರು.

ತನಿಖೆಯ ಕಾಲದಲ್ಲಿ ಮೃತ ಹೊಂದಿದ ಶ್ರೀಯುತ ಮಂಜುನಾಥ, ೩೪ ವರ್ಷ, ಮತ್ತು ಅಪರಾಧಿ ರಾಮಕೃಷ್ಣ, ೨೧ ವರ್ಷ, ಇವರಿಬ್ಬರೂ ಆಟೋಚಾಲಕರಾಗಿದ್ದಾರೆಂದು ತಿಳಿಯಿತು. ಇವರಿಬ್ಬರೂ ಹಿಂದೆ ಒಂದು ಆಟೋರಿಕ್ಷಾ ಕೊಳ್ಳುವುದರ ಬಗ್ಗೆ ಒಟ್ಟಾಗಿ ಹಣದ ವ್ಯವಹಾರ ನಡೆಸಿದ್ದರು. ಅಪರಾಧಿ ರಾಮಕೃಷ್ಣ ಶ್ರೀಯುತ ಮಂಜುನಾಥರವರಿಗೆ ೫,೦೦೦ ರೂ.ಗಳ ಸಾಲವನ್ನು ಪ್ರತ್ಯೇಕವಾಗಿ ಕೊಟ್ಟಿದ್ದಲ್ಲದೆ, ಈ ಸಾಲವನ್ನು ಕೂಡಲೇ ವಾಪಸ್ಸು ಕೊಡಬೇಕೆಂದು ಪದೇ ಪದೇ ಒತ್ತಾಯಿಸುತ್ತಿದ್ದರು. ಆದರೆ ಶ್ರೀಯುತ ಮಂಜುನಾಥರವರು, ಹಣವನ್ನು ಕೊಡುವುದಿಲ್ಲವೆಂದು ಒರಟಾಗಿ ಉತ್ತರಿಸಿದರು. ಇದರಿಂದ ಅಪರಾಧಿಯಾದ ರಾಮಕೃಷ್ಣನು ಕುಪಿತಗೊಂಡು ಶ್ರೀಯುತ ಮಂಜುನಾಥರವರನ್ನು ಕೊಲೆ ಮಾಡುವ ಉದ್ದೇಶದಿಂದ ೨ ಚಾಕುಗಳ ಸಹಾಯದಿಂದ ಕಂಠೀರವ ಸ್ಟುಡಿಯೋದ ಹತ್ತಿರ ಹೋಗುತ್ತಿರುವಾಗ ಮಂಜುನಾಥರವರ ಬೆನ್ನಮೇಲೆ ಇರಿದನು. ಕೂಡಲೇ ಮಂಜುನಾಥರವರು ತಾವಿಬ್ಬರೂ ಹೋಗುತ್ತಿದ್ದ ಆಟೋರಿಕ್ಷಾದಿಂದ ಇಳಿದು ಪ್ರಸಾದ್ ಟಿಫನ್ ರೂಮಿನೊಳಗೆ ಓಡಿಹೋದರು. ಅಪರಾಧಿಯು ಸಹ ಮಂಜುನಾಥರವರನ್ನು ಅಟ್ಟಿಸಿಕೊಂಡು, ಟಿಫನ್ ರೂಮಿನೊಳಕ್ಕೆ ಬಂದು, ಮಂಜುನಾಥರವರು ಕುರ್ಚಿಗೆಯ ಮೇಲೆ ಚಾಕುವಿನಿಂದ ಇರಿದನು ಮಂಜುನಾಥರವರು ಸ್ಥಳದಲ್ಲಿಯೇ ಮೃತಹೊಂದಿದರು. ಅಪರಾಧಿ ರಾಮಕೃಷ್ಣನನ್ನು ಟಿಫನ್

ರೂಮಿನೊಳಗಿದ್ದ ನಾಗರೀಕರು ಬಂಧಿಸಿ ಒಳಗಡೆ ಕೂಡಿಹಾಕಿದರು. ಪೋಲೀಸರು ತಕ್ಷಣ ಆಪರಾಧಿಯನ್ನು ದಿನಾಂಕ ೧೨-೮-೧೯೪೬ ರಂದೇ ಬಂಧಿಸಿ ನ್ಯಾಯಾಲಯದ ಮುಂದೆ ದಿನಾಂಕ ೧೩-೮-೧೯೪೬ ರಂದು ಹಾಜರುಪಡಿಸಲಾಯಿತು. ಆಪರಾಧಿಯನ್ನು ಈಗ ನ್ಯಾಯಾಂಗದ ವಶಕ್ಕೆ ದಿನಾಂಕ ೩೦-೮-೪೬ ರ ವರೆಗೆ ಕೊಟ್ಟಿರುತ್ತಾರೆ. ಸ್ಥಳದಲ್ಲಿದ್ದ ಎಲ್ಲಾ ಸಾಕ್ಷಿದಾರರ ಹೇಳಿಕೆಗಳನ್ನು ಪಡೆಯಲಾಗಿದೆ. ಈ ಮೊಕದ್ದಮೆಯ ತನಿಖೆಯನ್ನು ಶೀಘ್ರವಾಗಿ ಮುಗಿಸಿ ಪೈಜ್ಞಾನಿಕ ತಂತ್ರಜ್ಞರ ಅಭಿಪ್ರಾಯ ಬಂದ ಕೂಡಲೇ ಆಪಾದನೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು.

ವಿಲ್ಸನ್ ಗಾರ್ಡನ್‌ನಲ್ಲಿ ಶಾಮಂಣ್ಣ ರೆಡ್ಡಿ ಎಂಬುವರ ಕೊಲೆ ಬಗೆಗಿನ ವರದಿ

ತಾರೀಖು ೧೨-೮-೧೯೪೬ ರಂದು ಸುಮಾರು ಬೆಳಿಗ್ಗೆ ೧೧-೫೦ ಗಂಟೆಗೆ ವಿಲ್ಸನ್ ಗಾರ್ಡನ್ ಪೋಲೀಸ್ ಸ್ಟೇಷನ್‌ನಿಂದ ಸಬ್ ಇನ್ಸ್‌ಪೆಕ್ಟರ್ ರವರು ವಿಲ್ಸನ್ ಗಾರ್ಡನ್‌ನ ೧೦ನೇ ಅಡ್ಡ ರಸ್ತೆಯ ರಾಣಿ ಪೈನ್ಸ್ ಸ್ಪೋರ್ಟ್ಸ್ ಮುಂಭಾಗದಲ್ಲಿ ಯಾವುದೊ ವ್ಯಕ್ತಿಯನ್ನು ಕೊಲೆ ಮಾಡಲಾಗಿದೆ ಎಂಬ ಸಮಾಚಾರವನ್ನು ಕೇಳಿದರು. ಕೂಡಲೇ ಅವರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದರು. ಆ ಸ್ಥಳದಲ್ಲಿ ಸುಮಾರು ೪೦ ರಿಂದ ೫೦ ವಯಸ್ಸಿನ ಒಬ್ಬ ವ್ಯಕ್ತಿಯ ಹೆಣ ಬಿದ್ದಿದುದು ಕಂಡು ಬಂತು. ವ್ಯಕ್ತಿಗೆ ತಲೆ ಮೇಲೆ ಹರಿತವಾದ ಆಯುಧದಿಂದ ಹೊಡೆದ ಗಾಯಗಳಾಗಿದ್ದುವು. ಸಬ್ ಇನ್ಸ್‌ಪೆಕ್ಟರ್ ರವರು ಪಕ್ಕದಲ್ಲಿ ನೆರೆದಿದ್ದ ಜನರಲ್ಲಿ ವಿಚಾರಣೆ ಮಾಡಲಾಗಿ ಯಾರೋ ೫-೬ ಜನರು ಸಿ.ಎ.ಬಿ. ೧೯೪೧ ನಂಬರಿನ ಕಾರಿನಲ್ಲಿ ಬಂದು ಮೃತನಿಗೆ ಮಚ್ಚು ಕತ್ತಿಗಳಿಂದ ಹೊಡೆದು ಆದೇ ಕಾರಿನಲ್ಲಿ ಪರಾರಿಯಾದರು ಎಂದು ತಿಳಿದು ಬಂದಿತು. ಮತ್ತು ಮೃತನ ಹೆಸರು ಶಾಮಣ್ಣರೆಡ್ಡಿ ಎಂದೂ ಆವರು ಬೆಂಗಳೂರು ಜಿಲ್ಲೆಯ ಕೂಡ್ಲು ಎಂಬ ಹಳ್ಳಿಗೆ ಸೇರಿದವರೆಂದು ತಿಳಿದು ಬಂದಿತು. ಸಬ್ ಇನ್ಸ್‌ಪೆಕ್ಟರ್‌ರವರು ಈ ವಿಚಾರವನ್ನು ಪೋಲೀಸ್ ಕಂಟ್ರೋಲ್ ರೂಮಿಗೆ ತಿಳಿಸಲು ಅಲ್ಲಿಂದ ನಗರದ ಎಲ್ಲಾ ಪೋಲೀಸ್ ಅಧಿಕಾರಿಗಳಿಗೂ ಸಮಾಚಾರ ಮುಟ್ಟಿಸಿ ತಪ್ಪಿಸಿಕೊಂಡು ಹೋಗುತ್ತಿರುವ ಕಾರಿಗಾಗಿ ಕಣ್ಣು ಡಬೇಕೆಂದು ಆದೇಶಿಸಲಾಯಿತು. ಈ ಸಂಬಂಧದಲ್ಲಿ ಮೊಕದ್ದಮೆ ಸಂಖ್ಯೆ ೩೮೯/೪೬ ಕಲಂ ೧೪೩,೧೪೭,೧೪೮,೧೪೯ ಮತ್ತು ೩೦೨ ಐ.ಪಿ.ಸಿ ಯಡಿ ವಿಲ್ಸನ್ ಗಾರ್ಡನ್ ಪೋಲೀಸ್ ಸ್ಟೇಷನ್‌ನಲ್ಲಿ ಬಂದು ಕೇಸು ದಾಖಲು ಮಾಡಿಕೊಂಡು ಪೋಲೀಸ್ ಅಧಿಕಾರಿಗಳನ್ನು ಬೇರೆ ಬೇರೆ ಕಡೆಗೆ ಆಪರಾಧಿಗಳನ್ನು ಪತ್ತೆಹಚ್ಚಲು ಕಳುಹಿಸಲಾಯಿತು ವಿಚಾರಣೆ ಮುಂದುವರೆದಾಗ ಮೃತ ಶಾಮಣ್ಣರೆಡ್ಡಿಯವರಿಗೂ ಆವರ ಮಾವ ಆಣ್ಣಯ್ಯರೆಡ್ಡಿಯವರಿಗೂ ಜಮೀನಿನ ಬಗ್ಗೆ ಬಹಳ ದಿನಗಳಿಂದ ವ್ಯಾಜ್ಯವಿರುವದಾಗಿಯೂ, ಹಾಗೂ ಮೃತ ತಮ್ಮ ಮಾವನ ೧೩ ೧/೨ ವರೆ ಎಕರೆ ಜಮೀನಿನ ಮೇಲೆ ತಾನು ಗೇಣೀದಾರನೆಂದು ಆರ್ಜಿಸಲ್ಲಿಸಿದ್ದರು ಈ ವ್ಯಾಜ್ಯಕ್ಕೆ ನಾಂದಿ ಎಂದು ತಿಳಿದು ಬಂತು. ಮತ್ತು ಈ ಸಂಬಂಧದಲ್ಲಿ ಇವರ ನಡುವೆ ಆನೇಕ ಕೇಸುಗಳು ಬೇರೆ ಬೇರೆ ಕೋರ್ಟುಗಳಲ್ಲಿ ಇರುವುದಾಗಿಯೂ ತಿಳಿದು ಬಂತು. ಸುಮಾರು ೪ ವರ್ಷಕ್ಕೆ ಹಿಂದೆ ಇದೇ ವ್ಯಾಜ್ಯದಲ್ಲಿ ಮೃತನ ತಮ್ಮನನ್ನು ಆಣ್ಣಯ್ಯರೆಡ್ಡಿ ಮತ್ತು ಆವರ ಗುಂಪು ಆನೇಕಲ್ ತಾಲ್ಲೂಕಿನಲ್ಲಿ ಕೊಂದು ಹಾಕಿದ್ದು ಆ ಬಗ್ಗೆ ಆವರ ಮೇಲೆ ಒಂದು ಕೇಸು ದಾಖಲು ಆಗಿರುವುದಾಗಿಯೂ ತಿಳಿದು ಬಂತು. ಮತ್ತು ಮೃತನು ಆಣ್ಣಯ್ಯರೆಡ್ಡಿಯವರ ಒಬ್ಬ ಮಗಳನ್ನು ವಿಧಿವತ್ತಾಗಿ ಮದುವೆಯಾಗಿದ್ದು ೧೯೭೮ ರಲ್ಲಿ ಮತೊಬ್ಬ ಆಪ್ರಾಪ್ತ ವಯಸ್ಸಿನ ಮಗಳನ್ನು ಆಪಹರಿಸಿ ನಂತರ ಬಲಾತ್ಕಾರವಾಗಿ ಮದುವೆಯಾದುದಾಗಿಯೂ ಮತ್ತು ಇದು ಆವರಲ್ಲಿ ವೈರ ಹೆಚ್ಚಲು ಮತ್ತೂ ಕಾರಣವೆಂದೂ ತಿಳಿದು ಬಂತು.

ಘಟನೆ ನಡೆದ ದಿನ ಮೃತನು ವಿಲ್ಸನ್ ಗಾರ್ಡನ್‌ಗೆ ನಾರಾಯಣರೆಡ್ಡಿ ಎಂಬುವರ ಜೊತೆಯಲ್ಲಿ ಬಂದು ಆವರಿಗೆ ಸ್ವಲ್ಪ ದೂರದಲ್ಲಿ ಕಾಣಬರುತ್ತಿದ್ದ ತನ್ನ ಭಾವ ಮೈದುನ ವೆಂಕಟೇಶರೆಡ್ಡಿ ಮತ್ತು ಷಡ್ಕ ಲೋಕೇಶ್‌ರೆಡ್ಡಿ ಇವರುಗಳನ್ನು ತೋರಿಸಿ ಇವರು ತನ್ನ ವೈರಿಗಳೆಂದು ತಿಳಿಸಿದರೆಂದು ಗೊತ್ತಾಗಿದೆ. ಕೆಲ ನಿಮಿಷಗಳ ನಂತರ ಆದೇ ನಾರಾಯಣರೆಡ್ಡಿ ಈ ಇಬ್ಬರೂ ಮತ್ತು ಉಳಿದ ೩-೪ ಜನರೊಡನೆ ಶಾಮಣ್ಣರೆಡ್ಡಿಯವರ ಮೇಲೆ ಹಲ್ಲೆ. ನಡೆಸುತ್ತಿದ್ದುದನ್ನು ಕಂಡರು. ಇವರು ಕೊಟ್ಟ ಈ ಸುಳಿವನ್ನು ಅನುಸರಿಸಿ ಆದೇ ರಾತ್ರಿ ಟಾಟಾ ಸಿಲ್ಕ್ ಫಾರಂ ನಲ್ಲಿನ ಒಂದು ಮನೆಯಲ್ಲಿ ಬಚ್ಚಿಟ್ಟು ಕೊಂಡಿದ್ದ ಮುಖ್ಯ ಆರೋಪಿ ಲೋಕೇಶ್‌ರೆಡ್ಡಿಯನ್ನು ಬಂಧಿಸಲಾಯಿತು. ಆವರು ಕೊಟ್ಟ ಮಾಹಿತಿಯಂತೆ ಈ ಆಪರಾಧದಲ್ಲಿ ಉಪಯೋಗಿಸಿದ ಕಾರು ಮತ್ತು ಆಯುಧಗಳನ್ನು ಜೀವನಭೀಮಾ ನಗರದ ಹತ್ತಿರ ವಶಪಡಿಸಿಕೊಳ್ಳಲಾಯಿತು. ಈ ಆರೋಪಿಯನ್ನು ಮತ್ತೆ ಪ್ರಶ್ನಿಸಿದಾಗ ಈ ಕೊಲೆಯನ್ನು ಎಸಗಿದ ಇತರ ಆಪರಾಧಿಗಳು ಲಕ್ಷ್ಮೀಪತಿ, ವೆಂಕಟೇಶರೆಡ್ಡಿ ಮತ್ತು ಲೋಕೇಶ್ (ಎನೇ ಮನುಷ್ಯ) ಎಂದು ತಿಳಿಯಿತು. ಈ ಆಪರಾಧಿಗಳನ್ನು ಪತ್ತೆಹಚ್ಚಲು ತೀವ್ರ ಶೋಧನೆ ನಡೆದಿದೆ.

ತನಿಖೆಯನ್ನು ಮುಂದುವರಿಸಿದಾಗ ಈ ಕೊಲೆಯನ್ನು ಮೃತನ ಪಾಪ ಅಣ್ಣಯ್ಯರೆಡ್ಡಿ ಮತ್ತು ಇತರರು ಕೊಡ್ಲಸಲ್ಲಿರುವ ತಮ್ಮ ಮನೆಯಲ್ಲಿ ಯೋಜಿಸಿದರೆಂದು ತಿಳಿದು ಬಂತು. ಆದ್ದರಿಂದ ಕಲಂ ೧೨೦ (ಬಿ) ಐ.ಪಿ.ಸಿ.ಯನ್ನು ಆರೋಪಕ್ಕೆ ಸೇರಿಸಿ ಅಣ್ಣಯ್ಯ ರೆಡ್ಡಿಯವರನ್ನು ೧೭-೮-೮೬ ರಂದು ದಸ್ತಗಿರಿಮಾಡಲಾಯಿತು. ಅಣ್ಣಯ್ಯರೆಡ್ಡಿಯವರು ಈಗ ನ್ಯಾಯಾಂಗಪಶದಲ್ಲಿದ್ದಾರೆ. ಲೋಕೇಶ್ ರೆಡ್ಡಿಯವರನ್ನು ೨೦-೮-೮೬ರ ವರೆಗೆ ಪೋಲೀಸರ ವಶಕ್ಕೆ ಕೊಡಲಾಗಿದೆ. ತನಿಖೆಯು ಮುಂದುವರಿದಿದೆ.

ಶ್ರೀ ಹೆಚ್. ಡಿ. ಚೌಡಯ್ಯ.—ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಂತ್ರಿಗಳು, ಉತ್ತರವನ್ನು ಕೊಡುತ್ತಾ ಹೇಳಿದರು, ಏನು ಇಲ್ಲಿಯವರೆಗೂ ಚರ್ಚೆಯಾಗಿದೆ, ಅದಕ್ಕೆ ವಿವರವಾದ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ ಎಂದು. ಅಪರೇ ಒಪ್ಪಿದ್ದಾರೆ ಈ ವಿಷಯದಲ್ಲಿ ವಿಫಲರಾಗಿದ್ದೇವೆ ಎಂದು ಸರ್ಕಾರ ಹಾಗೂ ಸನ್ಮಾನ್ಯ ಮಂತ್ರಿಗಳು ಏನು ಇಲ್ಲಿ ಚರ್ಚೆ ನಡೆಯಿತು, ಅದಕ್ಕೆ ವಿವರವಾದ ಉತ್ತರವನ್ನು ಕೊಡುವುದರಲ್ಲಿ ವಿಫಲರಾಗಿದ್ದಾರೆ. ಮತ್ತು ಸರ್ಕಾರ ಮುಂಜಾಗ್ರತ ಕ್ರಮವನ್ನು ವಹಿಸಿದ್ದಿದ್ದರೆ ಬಹುಶಃ ಈ ಸಾವುಗಳನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತಿತ್ತು. ಆದರಿಂದ ಈ ಸರ್ಕಾರದ ನೀತಿ ಹಾಗೂ ಧೋರಣೆ ಏನಿದೆ ಅದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಕಾಂಗ್ರೆಸ್ ಐ ಪಕ್ಷದ ಸದಸ್ಯರೆಲ್ಲರೂ ಸದನದಿಂದ ಹೊರಗೆ ನಿರ್ಗಮಿಸಿದರು)

ಅಧ್ಯಕ್ಷರು.—ಸಭೆಯು ನಾಳೆ ಬೆಳಗ್ಗೆ ೯-೦೦ ಗಂಟೆಗೆ ಪುನಃ ಸೇರುವುದು.

(ಸಭೆಯು ೭-೫೦ಕ್ಕೆ ಎಮ್ದು ೨೨-೮-೮೬ ರಂದು ಬೆಳಗ್ಗೆ ೯-೦೦ ಗಂಟೆಗೆ ಪುನಃ ಸೇರಲು ತೀರ್ಮಾನಿಸಲಾಯಿತು)

[W D. 32]